ವಾರಕ್ಕೊಂದು ಸಲ ಬಂದು ಅವಳ ಫೋಟೊ ಎದುರು ದೀಪ ಹಚ್ಚಿ, ಸ್ವಲ್ಪ ಹೊತ್ತು ಕೂತಿದ್ದು ಹೋಗಬೇಕು ಅನ್ನಿಸಿತು.

ಟೀವಿ, ಪತ್ರಿಕೆಗಳ ಆಫೀಸುಗಳಿಂದ ಫೋನುಗಳು ಬರತೊಡಗಿದವು. ಎತ್ತುವುದೇ ಬೇಡವೇ ಎನ್ನುವ ಗೊಂದಲಕ್ಕೆ ಬಿದ್ದ. ಮತ್ತೆ ಮತ್ತೆ ಬರುತ್ತಲೇ ಇದ್ದವು. ಕೊನೆಗೆ ಎತ್ತಿ, 'ಪ್ರೊ ಬಲರಾಮ್ ಅವರ ಸಾವಿನ ಬಗ್ಗೆ ಏನಾದರೂ ಕೇಳಬೇಕು ಅಂತಿದ್ದರೆ ಕೆ.ಬಿ. ಹಿಲ್ಸ್ ಪೊಲೀಸರನ್ನು ಕೇಳಿ ಅಥವಾ ಆಚಾರ್ಯ ಕಾಲೇಜಿನ ಲೆಕ್ಚರರ್ ಗಣಪತಿ ಅವರನ್ನು ಕೇಳಿ' ಅಂತ ಸಮಾಧಾನದಿಂದಲೇ ಉತ್ತರಿಸಿದ. ಸ್ವಲ್ಪ ಹೊತ್ತಿನ ನಂತರ ಎಸ್.ಜೆ. ಮೆಡಿಕಲ್ ಕಾಲೇಜು ಆಸ್ಪತ್ರೆಯಿಂದ ಫೋನು ಬಂತು. ಪ್ರೊ. ಬಲರಾಮ್ ಅವರು ತಮ್ಮ ದೇಹವನ್ನು ನಮ್ಮ ಕಾಲೇಜು ಆಸ್ಪತ್ರೆಗೆ ದಾನ ಮಾಡಿದ್ದಾರೆ. ಬಾಡಿ ತಂಗಂಡು ಹೋಗೋಕೆ ಸಂಜೆ ನಾಲ್ಕರ ಹೊತ್ತಿಗೆ ಬರಬಹುದೇ ಅಂತ ಆ ತುದಿಯಿಂದ ಆಸ್ಪತ್ರೆಯ ಪಿಆರ್‌ಒ ಅಂತ ಹೇಳಿಕೊಂಡ ವ್ಯಕ್ತಿ ಕೇಳಿದರು. 'ಬನ್ನಿ, ತಗಂಡು ಹೋಗಿ' ಅಂತ ಉತ್ತರಿಸಿದ.

ಅಂತ್ಯಕ್ರಿಯೆಯ ವಿಧಿಗಳನ್ನು ಗಣಪತಿಯಿಂದ ಮಾಡಿಸಿದರೆ ಹೇಗಿರುತ್ತೆ ಅಂತ ಯೋಚಿಸುತ್ತಿರುವ ಹೊತ್ತಿನಲ್ಲಿ ಬಂದ ಫೋನ್ ಕರೆ ಆ ಸಮಸ್ಯೆಯನ್ನೂ ನಿವಾರಿಸಿತು. ಅಪ್ಪ ಸತ್ತ ಸುದ್ದಿ ಗೊತ್ತಾದ ಕ್ಷಣದಿಂದ ಅವನ ತಲೆಯಲ್ಲಿ ಹತ್ತಾರು ನೆನಪುಗಳು, ಗಾಢ ವಿಷಾದದ ಭಾವಗಳು, ಎಂದೋ ಆಡಿದ್ದ ಮಾತುಗಳು, ಅಮ್ಮನ ಅಸಹಾಯಕ ಮುಖ, ನಿಟ್ಟುಸಿರುಗಳು ನೆನಪಾಗುತ್ತಿದ್ದವು. ಅಮ್ಮನನ್ನು ನಿರಂತರವಾಗಿ ಗೋಳು ಹುಯ್ದುಕೊಂಡ ಬಲರಾಮ್ ನರಳಿ ನರಳಿ ಸಾಯಬೇಕು ಅಂತ ಅರುಣ ಬಯಸಿದ್ದ. ಅವರ ಸಾವು ಇಷ್ಟು ಸಲೀಸಾಗಿ ಆಗುತ್ತೆ ಅಂತ ಊಹಿಸಿರಲೂ ಇಲ್ಲ. ಇದ್ದಕ್ಕಿದ್ದ ಹಾಗೆ ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದೇ ಅನ್ನಿಸಿ ಆ ಸಾಧ್ಯತೆ ಕುರಿತು ಸ್ವಲ್ಪ ಹೊತ್ತು ಯೋಚಿಸಿದ.

ಎರಡು ಗಂಟೆ ಹೊತ್ತಿಗೆ ಗಣಪತಿಯಿಂದ ಫೋನ್ ಬಂತು. 'ಪಿಎಂ ಮುಗೀತು, ಸ್ವಲ್ಪ ಹೊತ್ತಲ್ಲಿ ಬಾಡೀನ ಕೊಡ್ತಾರೆ. ಇವತ್ತು ಮನೆಯಲ್ಲೇ ಇಡಬೇಕಾಗುತ್ತೆ. ಇವತ್ತು ಅಮಾವಾಸ್ಯೆಯಂತೆ. ದಿನ ಚೆನ್ನಾಗಿಲ್ಲ, ನಾಳೆ ಸೂರ್ಯೋದಯದ ನಂತರ ದಹನ ಕಾರ್ಯ ಮಾಡಬಹುದು ಅಂತ ನಮ್ಮ ಪುರೋಹಿತರು ಹೇಳಿದರು, ನೀನೇನು ಹೇಳ್ತೀಯಾ?' ಅಂದ.

'ಗಣಪ, ಮನೆ ಹತ್ರ ತುಂಬಾ ಜನ ಬಂದಿದ್ದಾರೆ. ಬಲರಾಮ್ ತಮ್ಮ ಬಾಡೀನ ಎಸ್.ಜೆ. ಮೆಡಿಕಲ್ ಕಾಲೇಜು ಆಸ್ಪತ್ರೆಗೆ ದಾನ ಮಾಡಿದ್ದಾರಂತೆ. ಸ್ವಲ್ಪ ಹೊತ್ತಿನ ಮೊದಲು ಕಾಲೇಜಿನ ಪಿಆರ್‌ಒ ಫೋನ್ ಮಾಡಿದ್ದರು. ಅವರೇ ಬಂದು ಬಾಡೀನ ತಗಂಡು ಹೋಗ್ತಾರಂತೆ. ನಾಲ್ಕು ಗಂಟೆಗೆ ಬರ್ತಾರೆ. ಬಾಡಿ ತಂದು ಮನೆ ಮುಂದೆ ಸ್ವಲ್ಪ ಹೊತ್ತು ಇಟ್ಟರೆ ಸಾಕು. ಮೆಡಿಕಲ್ ಕಾಲೇಜಿನವರಿಗೆ ನೀನೇ ಹ್ಯಾಂಡೋವರ್ ಮಾಡು. ನಿನ್ನ ಸ್ಟೂಡೆಂಟ್ಸ್‌ಗಳು, ಕಲೀಗ್‌ಗಳು ತುಂಬಾ ಜನ ಬಂದಿದ್ದಾರೆ. ಅವರೇ ಎಲ್ಲ ಸಿದ್ಧತೆ ಮಾಡ್ತಿದ್ದಾರೆ. ನಾನು ಮನೆಗೆ ಹೋಗ್ತೀನಿ, ಎಲ್ಲವನ್ನೂ ನೀನೇ ನೋಡಿಕೋ. ಅದು ನೀನು ಪ್ರೊ. ಬಲರಾಮ್ ಅವರಿಗೆ ಸಲ್ಲಿಸುವ ಗೌರವ' ಅಂತ ಹೇಳಿ ಫೋನ್ ಕಟ್ ಮಾಡಿದ. ಅವನ ಮನಸ್ಸಿಗೆ ನಿರಾಳವೆನಿಸಿತು.

## ಪ್ರೇಮಕುಮಾರ್ ಹರಿಯಬ್ಬೆ

ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮದವರು. ವೃತ್ತಿಯಿಂದ ಪತ್ರಕರ್ತ. ಈಗ ಬೆಂಗಳೂರಿನಲ್ಲಿ ವಾಸ. 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳಲ್ಲಿ ಅವರ ಕಥೆಗಳು ಪ್ರಕಟವಾಗಿವೆ. ಅವರ ಇತ್ತೀಚಿನ ಕಥಾಸಂಕಲನ 'ಅಕಾಲ'.